<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

**<u>ಸಿ.ಸಿ. ಸಂಖ್ಯೆ:463/2023</u>**

**ಸಾಕ್ಷಿಯನ್ನು ದಿಃ 04.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ರಿಯಾಜ್ ಪಾಷಾ | ಸಿಡಬ್ಲ್ಯೂ:4 | ಪಿಡಬ್ಲ್ಯೂ:4 |
| ತಂದೆಯ ಹೆಸರು | ಅಸ್ಲಮ ಪಾಷಾ | | |
| ವಯಸ್ಸು | 42 ವರ್ಷ | | |
| ಉದ್ಯೋಗ | ಕೂಲಿ ಕೆಲಸ | | |
| ವಾಸಸ್ಥಳ | ಶಬ್ಬೀರ್ ನಗರ, ಹುಣಸೂರು. | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನಿಪಿ. 2 ರ ಮಹಜರ್ ಮತ್ತು ನಿಪಿ. 3 ರ ನಕ್ಷೆಯಲ್ಲಿ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಸಹಿಗಳನ್ನು ನಿಪಿ. 2(ಸಿ) ಮತ್ತು 3(ಸಿ) ಎಂದು ಗುರುತಿಸಲಾಯಿತು. ಈಗ್ಗೆ 2 ವರ್ಷಗಳ ಹಿಂದೆ ಠಾಣೆಯಲ್ಲಿ ನನ್ನ ಗಾಡಿಯನ್ನು ಬಿಡಿಸಿಕೊಳ್ಳಲು ಹೋದಾಗ ಸಹಿ ಮಾಡಿದ್ದೆ. ಗಾಡಿ ಬಿಡಿಸಿಕೊಳ್ಳಲು ನನ್ನ ಅಣ್ಣ ಫಯಾಜ್ ನನ್ನು ಕರೆದುಕೊಂಡು ಹೋಗಿದ್ದು, ಅಲ್ಲಿ ಪೊಲೀಸರ ಹೇಳಿಕೆ ಮೇರೆಗೆ ನಾನು ಮತ್ತು ಅಣ್ಣ ಇಬ್ಬರು ಸಹಿ ಮಾಡಿರುತ್ತೇವೆ. ಆಗ ಸಮಯ ಸಂಜೆ 4.30 ಗಂಟೆ ಮೇಲೆ ಆಗಿತ್ತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲು ಸಸಅ ರವರಿಂದಃ–</u>**

ದಿಃ 15.01.2023 ರಂದು ನಾಗಾಪುರ ಹಾಡಿ, 4 ನೇ ಘಟಕದ ಬಳಿ, ಹುಣಸೂರು ಗ್ರಾಮದಲ್ಲಿ ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ನಾವು ಹಾಜರಿದ್ದು, ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 4.30 ರಿಂದ 5.30 ರ ವರೆಗೆ ಮಹಜರ್ ಮಾಡಿದ್ದು, ನನ್ನ ಜೊತೆ ಚಾಸಾ 3 ರವರು ಹಾಜರಿದ್ದರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಸ್ಥಳ ಮಹಜರ್ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಏನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ. 3 ರಂತೆ ನಕ್ಷೆಯನ್ನು ಸಹ ತಯಾರಿಸಿದ್ದರೂ ಎಂದರೆ ಸರಿಯಲ್ಲ. ನಿಪಿ. 9 ಮತ್ತು 10 ರಂತೆ ಸ್ಥಳದಲ್ಲಿ ಪೋಟೊ ಸಹ ತೆಗೆದಿದ್ದರು ಎಂದರೆ ಸಾಕ್ಷಿ ಗಾಡಿ ಬಿಡಿಸಿಕೊಳ್ಳಲು ಹೋದಾಗ ಪೊಲೀಸರು ಸ್ಥಳಕ್ಕೆ ಕರೆದುಕೊಂಡು ಹೋಗಿ ಸಹಿ ಮಾಡಿರುತ್ತಾರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ.

**<u>ಪಾಟೀ ಸವಾಲುಃ ಇರುವುದಿಲ್ಲ.</u>**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.

ದಿಃ 15.01.2023 ರಂದು ಮಧ್ಯಾಹ್ನ 12.50 ಗಂಟೆ ಸಮಯದಲ್ಲಿ ವೀರನಹೂಸಹಳ್ಳಿ – ಹುಸೂರು ರಸ್ತೆಯಲ್ಲಿ ನಾಗಾಪುರ ಹಾಡಿ 4 ನೇ ಘಟನ ಗೇಟ್ ಬಳಿ ಇರುವಾಗ ವೀರನಹೊಸಹಳ್ಳಿರಸೇತ ಕಡೆಯಿಂದ ಎಡ ಭಾಗದಲ್ಲಿ ಒಂದು ಗೂಡ್ಸ್ ಆಟೋ ಬರುತ್ತಿದ್ದು, ಹುಣಸೂರು ಕಡೆಯಿಂದ ಒಂದು ಸ್ಕೂಟರ್ ನ ಸವಾರ ತನ್ನ ಸ್ಕೂಟರ್ ಅನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಹೋಗಿ ಎದುರುಗಡೆಯಿಂದ ಬರುತ್ತದ್ದ ಗೂಡ್ಸ್ ಆಟೋಗೆ ಡಿಕ್ಕಿ ಮಾಡುವಂತೆ ಬಂದಾಗ ಆಟೋದ ಚಾಲಕನು ಬ್ರೆಕ್ ಹಾಕಿದಾಗ ಆಟೋ ರಸ್ತೆಯ ಬಲಭಾಗಕ್ಕೆ ಪಲ್ಟಿ ಹೊಡೆದಾಗ ಅದರ ಚಾಲಕ ಆಟೋದಿಂದ ರಸ್ತೆಗೆ ಬಿದ್ದಾಗ ಆಟೋ ಚಾಲಕನ ಮೇಲೆ ಉರುಳಿ ಬಿದ್ದು, ಪುನಃ ಮುಂದೆ ಹೋಗಿ ಬಿದ್ದಿತ್ತು ಎಂದರೆ ನನಗೆ ಗೊತಿತಲ್ಲ. ಆಟೋದಲ್ಲಿ ಇದ್ದ ಮತ್ತೊಬ್ಬ ಹುಡುಗ ಸಹ ಕೆಳಗೆ ಬಿದ್ದ ಎಂದರೆ ನನಗೆ ಗೊತ್ತಿಲ್ಲ. ಸ್ಕೂಟರ್ ಸವಾರ ಸ್ಕೂಟರ್ ಅನ್ನು ರಸ್ತೆ ಬಳಿ ನಿಲ್ಲಿಸಿ ಆಟೋ ಸವಾರರನ್ನು ಹೋಗಿ ನೋಡಿದ ತಕ್ಷಣ ಅಲ್ಲಿಂದ ಸ್ಕೂಟರ್ ಅನ್ನು ತೆಗೆದುಕೊಂಡು ಹೊೇದ ಎಂದರೆ ನನಗೆ ಗೊತ್ತಿಲ್ಲ. ನಂತರ ಸಂಖ್ಯೆ ನೋಡಲಾಗಿ ಕೆಎ 45 ಇಸಿ 5786 ಸುಜೂಕಿ ಎಕ್ಸಿಸ್ ಸ್ಕೂಟರ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು ಮತ್ತೆ ರಸ್ತೆ ಬಳಿ ಇದ್ದವರು ಓಡಿ ಹೋಗಿ ನೊೇಡಿ ಆಟೊೇ ಸವಾರರನ್ನು ಎತ್ತಿ ನೋಡಲಾಗಿ ಆತನ ಹೆಸರು ಹುಣಸೂರಿನ ರಫೀಕ್ ಖಾನ್ ಎಂದು ತಿಳಿದು ಬಂತುಎಂದರೆ ಸರಿಯಲ್ಲ. ಆತನಿಗೆ ಎದೆಗೆ ಭಾಗಕ್ಕ, ಎದೆ, ಕಿವಿ ಮೂರು ಬಾಯಿಯಲ್ಲಿ ರಕ್ತ ಬರುತ್ತಿತ್ತು ಎಂದರೆ ಸರಿಯಲ್ಲ. ಆಟೊೇದಲ್ಲಿ ಇದ್ದ ಇನ್ನೊಬ್ಬ ಹುಡುಗನ ಹೆಸರು ಕೇಳಲಾಗಿ ಮುಬಾರಕ್ ಪಾಷಾ ಎಂದು ಗೊತ್ತಾಗಿ ಅವನ ಎಡ ಭಾಗದ ಭುಜಕ್ಕೆ ನೋವಾಗಿತ್ತು ಎಂದು ತಿಳಿಸಿದ್ದ ಎಂದರೆ ಸರಿಯಲ್ಲ. ನಂತರ ನಾವೆಲ್ಲರೂ ಸೇರಿ ಏಟಾಗಿದ್ದ ರಫೀಕ್ ಖಾನ್ ಮತ್ತು ಮುಬಾರಕ್ ಪಾಷಾ ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆ ಆಟೊೇದದಲ್ಲಿ ಕಳುಹಿಸಿದೇ ಎಂದರೆ. ಕೆಎ 45 6776 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಎಟಾಗಿದ್ದ ರಫೀಕ್ ಖಾನ್ ರವರು ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಗೆ ಸೇರಿಸಲು

ಹೋಗುವಾಗ ಮಾರ್ಗ ಮಧ್ಯ ಬನ್ನಿಕುಪ್ಪೆ ಗ್ರಾಮದ ಬಳಿ ಮಧ್ಯಾಹ್ನ 2.45 ಕ್ಕೆ ಮೃತ ಪಟ್ಟಿದ್ದು ಗೊತ್ತಾಯಿತು ಎಂದರೆ ಸರಿಯಲ್ಲ. ಆದಿನ ಬೈಕ್ ಅನ್ನು ನ್ಯಾಯಾಲಯದ ಮುಂದಿರುವ ಆರೋಪಿಯೆ ಓಡಿಸಿಕೊಂಡು ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ. 11 ಎಂದು ಗುರುತಿಸಲಾಯಿತು. ನಿಪಿ. 11 ರಂತೆ ಹೇಳಿಕೆ ನೀಡಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ**

**ಕಾಲಾವಕಾಶ ಕೋರಿದ್ದರಿಂದ, ಮುಂದೂಡಲಾಯಿತು.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.